ದಿನಾಂಕಃ 25-07-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ವಿ. ಆರ್. ವಕೀಲರಿಂದಃ –**

2016 ರಲ್ಲಿ ನನ್ನ ಬ್ಯಾಂಕ್ ಬ್ಯಾಲೆನ್ಸ ಎಷ್ಟು ಇತ್ತು ಎಂದು ನನಗೆ ನೆನಪಿಲ್ಲ. 2014-15-16 ರ ಸಾಲಿನಲ್ಲಿ ನನ್ನ ಹೆಸರಿನಲ್ಲಿ ಯಾವುದೇ ಆಸ್ತಿ ಇತ್ತೇ ಎಂದರೆ ದ್ವಿ ಚಕ್ರ ವಾಹನ ಮಾತ್ರ ಇತ್ತು. 2017-18 ನೇ ಸಾಲಿನ ಆದಾಯ ತೆರಿಗೆ ವಿವರದಲ್ಲಿ ಆರೋಪಿಯು 2016-17 ರಲ್ಲಿ ನನ್ನ ಫರ್ಮ ಖಾತೆಗೆ ವರ್ಗಾಯಿಸಿದ ರೂ. 18,64,000/- ಹಾಗೂ ರೂ. 5,61,000/-ಗಳನ್ನು ತೋರಿಸಿರುವುದಿಲ್ಲ ಎಂದರೆ ಅದು ನನ್ನ ವೈಯಕ್ತಿಕ ಹಣ ಆಗಿದ್ದರಿಂದ ತೋರಿಸಿರುವುದಿಲ್ಲ. ವೈಯಕ್ತಿಕ ಖಾತೆಗೆ ಹಾಕಿಸಿಕೊಳ್ಳಬಹುದಾಗಿತ್ತು ಎಂದರೆ ಆರೋಪಿ ಫರ್ಮ ಖಾತೆಗೆ ಜಮೆ ಮಾಡಿರುತ್ತಾರೆ. ಫರ್ಮ ಖಾತೆಯಿಂದ ಯಾರಿಗಾದರೂ ಹಣ ವರ್ಗಾವಣೆ ಮಾಡಿದ್ದೆ ಆಗಿದ್ದಲ್ಲಿ ಅದನ್ನು ತೆರಿಗೆ ದಾಖಲೆಗಳಲ್ಲಿ ತೋರಿಸಲಾಗುತ್ತದೆಯೇ ಎಂದರೆ ಫರ್ಮ ಸಂಬಂಧಪಟ್ಟ ಹಣ ಆಗಿದ್ದರೆ ತೋರಿಸುತ್ತೇವೆ. ದಿಃ 31-03-2018 ರ ಅಯ್ಯವ್ಯಯ ಪಟ್ಟಿಯಲ್ಲಿ ನಾಗರಾಜ ಅಮಾತಿ ಎನ್ನುವವರ ಹೆಸರಿನಲ್ಲಿ 'Unsecured Loan' ಎಂದು ರೂ. 70,000/- ಗಳನ್ನು ತೋರಿಸಲಾಗಿದೆ ಎಂದರೆ ಸರಿ.

2. ನಾಗಪ್ಪ ಹನುಮಂತಪ್ಪ ಹಂಚಿನೆರ ಎನ್ನುವವರ ಪರಿಚಯ ಇರುತ್ತದೆ. ಅವರ ವಿರುದ್ಧ ಸಿ.ಸಿ. ನಂಃ 01/2021 ರಂತೆ ಚಕ್ ಬೌನ್ಸ ಪ್ರಕರಣವನ್ನು ರೂ.8,00,000/- ಗಳಿಗೆ ದಾಖಲಿಸಿರುತ್ತೇನೆ. ಸಾಕ್ಷಿದಾರರು ಸದರಿ ಪ್ರಕಣದ ದೃಢೀಕೃತ ದಾಖಲೆಗಳನ್ನು ನೋಡಿ ಒಪ್ಪಿಕೊಂಡ ಮೇರೆಗೆ ಅದನ್ನು **ನಿಡಿ-3** ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿನ ರೂ. 8,00,000/- ಹಣವನ್ನು 2018-19 ಹಾಗೂ 2019-20 ರ ತೆರಿಗೆ ದಾಖಲೆಗಳಲ್ಲಿ ತೋರಿಸಲಾಗಿದೆ ಎಂದರೆ ನನಗೆ ನೆನಪಿಲ್ಲ. ಸಾಕ್ಷಿದಾರರು ಮುಂದುವರೆದು ಕಾಣಿಸಲಾಗಿದೆ ಎಂದು ನುಡಿದಿರುತ್ತೇನೆ. ನಮ್ಮ ಫರ್ಮ ಖಾತೆಯಿಂದ ನಾಗಪ್ಪ ಹಂಚಿನೆರರವರಿಗೆ ಹಣ ನೀಡಲಾಗಿದೆ ಎಂದರೆ ಸರಿ. ದಿಃ 31-03-2019 ರ ಅಯ್ಯವ್ಯಯ ಪಟ್ಟಿಯಲ್ಲಿ ನಾಗಪ್ಪ ಹರಿಜನ ಎನ್ನುವವರ ಹೆಸರಿನಲ್ಲಿ 'Unsecured Loan' ಎಂದು ರೂ. 5,00,000/- ಗಳನ್ನು ತೋರಿಸಲಾಗಿದೆ ಎಂದರೆ ಸರಿ.

3. ಆರೋಪಿಗೆ ದಿಃ 18-04-2019 ರಂದು ರೂ. 6,00,000/- ಹಾಗೂ ದಿಃ 12-05-2019 ರಂದು ರೂ. 7,00,000/- ಹಣವನ್ನು ಕೊಟ್ಟ ಬಗ್ಗೆ ತೆರಿಗೆ ದಾಖಲೆಗಳಲ್ಲಿ

ತೋರಿಸಿರುವುದಿಲ್ಲ ಎಂದರೆ ಅದು ನನ್ನ ವೈಯಕ್ತಿಕ ಹಣ. ಸದರಿ ಹಣದ ಮರುಪಾವತಿಗಾಗಿ ನೀಡಲಾಗಿದೆ ಎನ್ನಲಾದ ನಿಪಿ-1 ಮತ್ತು 2 ರ ಚೆಕ್ಕುಗಳನ್ನು ವೈಯಕ್ತಿಕ ಖಾತೆಗೆ ಹಾಕಿದೇ ಫರ್ಮನ ಖಾತೆಗೆ ಏಕೆ ಜಮೆ ಮಾಡಲಾಯಿತು ಎನ್ನುವ ವಕೀಲರ ಪ್ರಶ್ನೆಗೆ ಆರೋಪಿ ಫರ್ಮ ಖಾತೆಗೆ ಚೆಕ್ಕನ್ನು ನೀಡಿದ್ದರಿಂದ ಹಾಕಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಆ ಕಾಲಕ್ಕೆ ವೈಯಕ್ತಿಕವಾಗಿ ಚೆಕ್ಕು ಬರೆದುಕೊಡಲು ಆರೋಪಿಗೆ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಆಗ ನನಗೆ ಅದರ ಬಗ್ಗೆ ಅರಿವಿರಲಿಲ್ಲ.

4. ಸಾಕ್ಷಿದಾರರಿಗೆ ದಿಃ 28-02-2023 ರಂದು ಯೂನಿಯನ್ ಬ್ಯಾಂಕ್ ಇಂಡಿಯಾರವರು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಚೆಕ್ಕು ಹಾಗೂ ಇತರೆ ದಾಖಲೆಗಳನ್ನು ಸಾಕ್ಷಿದಾರರಿಗೆ ತೋರಿಸಲಾಗಿ ಅವುಗಳಲ್ಲಿ ದಿಃ 26-12-2016, ದಿಃ 21-12-2016, ದಿಃ 13-12-2018, ದಿಃ 30-12-2017, ದಿಃ 13-04-2017, ದಿಃ 10-07-2017, ದಿಃ 30-01-2019 ರ ಚೆಕ್ಕು, ಆರ್.ಟಿ.ಜಿ.ಎಸ್ ನಮೂನೆ, ಎಫ್.ಡಿ.ಆರ್. ನಮೂನೆ ಹಾಗೂ ಚೆಲನ್ ಗಳಲ್ಲಿನ ಬರವಣಿಗೆ ಹಾಗೂ ಸಹಿಗಳು ಅವರದೇ ಎಂದು ಸಾಕ್ಷಿದಾರರು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಗಳನ್ನು ಒಟ್ಟಾಗಿ **ನಿಡಿ-4** ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮುಂದುವರೆದು ಆರೋಪಿ ಹೇಳಿದ ಮೇರೆಗೆ ಬರೆದಿರುತ್ತೇನೆ ಎಂದು ನುಡಿದಿರುತ್ತಾರೆ. ಆರೋಪಿಗೆ ಸಂಬಂಧಪಟ್ಟ ಸುಮಾರು ದಾಖಲೆಗಳಲ್ಲಿ ನನ್ನ ಸಹಿ ಇದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಅದು Self Cheque ಮೇಲೆ ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯವನ್ನು ನೀಡಲಾಯಿತು.**

ತೆ.ನ್ಯಾ.ದಲ್ಲಿ ಬೆ. ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ.ಹೇ.ಕೆ.ಸರಿ ಇದೆ. ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು